ಸ್ಮಶಾನಕ್ಕೆ ಭೂಮಿ ಕಾದಿರಿಸುವಿಕೆ

697 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪ್ರತಿಯೊಂದು ಗ್ರಾಮಕ್ಕೂ ಸ್ಮಶಾನಕ್ಕೆ ಭೂಮಿಯನ್ನು ಕಾಯ್ದಿರಿಸುವ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?*

ಆ) *ಬಂದಿದ್ದಲ್ಲಿ ಅದರ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು)

ಅ) ಹೌದು.

ಆ) ಒಟ್ಟು 27468-34 ಎಕರೆ ಜಮೀನನ್ನು ಹಿಂದೂ ರುದ್ರ ಭೂಮಿಗಾಗಿ ಕಾಯ್ದಿರಿಸ -ಲಾಗಿದೆ ಹಾಗೂ ಅದನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ನಗರ ಪಾಲಿಕೆಗಳಿಗೆ ಮತ್ತು ಟೌನ್ ಪಂಚಾಯಿತಿಗಳಿಗೆ ಹಸ್ತಾಂತರಿಸಲಾಗುತ್ತಿದೆ. ಸ್ಮಶಾನದ ಸಲುವಾಗಿ ಜಮೀನನ್ನು ಭೂಮಾಲೀಕರಿಂದ ಕೊಂಡುಕೊಳ್ಳುವ ಕುರಿತು ಸರ್ಕಾರಿ ಆದೇಶ ಸಂಖ್ಯೆ : ಕಂಇ 185 ಭೂ ಸ್ವಾಮ್ಯಾ 92 ದಿ: 20-10-95ರ ಪ್ರಕಾರ ಅವಕಾಶ ಕಲ್ಪಿಸಲಾಗಿದೆ. ಈ ಆದೇಶದನ್ವಯ ಮಾರಾಟಕ್ಕೆ ಜಮೀನುದಾರರು ಒಪ್ಪಿಗೆ ನೀಡದೇ ಇದ್ದ ಪಕ್ಷದಲ್ಲಿ ಅಂಥಹ ಚರ್ಚಾಸ್ಪದ ಜಮೀನನ್ನು ಭೂಸ್ವಾಧೀನ ಕಾಯಿದೆ ತುರ್ತು ಕಲಂ 17ರ ಅಡಿಯಲ್ಲಿ ಭೂಸ್ವಾಧೀನಕ್ಕೆ ಒಳಪಡಿಸಿ ಅತ್ಯಲ್ಪ ಕಾಲಾವಕಾಶದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲು ಆದೇಶಿಸಲಾಗಿದೆ ಹಾಗೂ ಸದರಿ ಆದೇಶದನ್ವಯ ಕ್ರಮ ತೆಗೆದುಕೊಳ್ಳುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಪ. ಜಾತಿ/ಪ.ವರ್ಗದ ವಿದ್ಯಾರ್ಥಿನಿಲಯಗಳು

699 - ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉಡುಪಿ ಜಿಲ್ಲೆಯಲ್ಲಿರುವ ಪ.ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮತ್ತು ಗ್ರಾಮವಾರು ತಿಳಿಸುವುದು)*

ಆ) *ಈ ವಿದ್ಯಾರ್ಥಿನಿಲಯಗಳಿಗೆ ಮಂಜೂರಾದ ಹುದ್ದೆಗಳೆಷ್ಟು? ಅವುಗಳಲ್ಲಿ ಕೊರತೆಯಿರುವ ಹುದ್ದೆಗಳೆಷ್ಟು?*

ಇ) *ಈ ಕೊರತೆಯನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಉಡುಪಿ ಜಿಲ್ಲೆಯಲ್ಲಿ 11 ಪರಿಶಿಷ್ಟ ಜಾತಿಯ ಸರ್ಕಾರಿ ಬಾಲಕರ ವಿದ್ಯಾರ್ಥಿ

ನಿಲಯಗಳು. 2 ಪರಿಶಿಷ್ಟ ವರ್ಗದ ಬಾಲಕರ ವಿದ್ಯಾರ್ಥಿನಿಲಯ ಹಾಗೂ 6 ಪರಿಶಿಷ್ಟ ಜಾತಿಯ ಬಾಲಕಿಯರ ವಿದ್ಯಾರ್ಥಿನಿಲಯಗಳು ಒಟ್ಟಿಗೆ 21 ವಿದ್ಯಾರ್ಥಿನಿಲಯಗಳಿರುತ್ತವೆ.

ಪ.ಜಾತಿ ಬಾಲಕರ ವಿದ್ಯಾರ್ಥಿನಿಲಯ

1.	ಅಮೆಪಿರ್, ಕುಂದಾಪುರ	1
2.	ಕುಂದಾಪುರ	2
3.	ಬಜಗೋಲಿ ಕಾರ್ಕಳ	1
4.	ಹೆಬ್ರಿ "	1
5.	ಮೂಡಬಿದ್ರೆ "	1
6.	ಮುನಿಯಾಲು "	1
7.	ಕುಂಜಿಬೆಟ್ಟು, ಉಡುಪಿ	1
8.	ಕುರಡಿ "	1
9.	ಪಾಚುಬಿದ್ರಿ "	1
10.	ಯದತಾಡಿ "	1
		11

ಪ.ಜಾತಿಯ ಬಾಲಕಿಯರ ವಿದ್ಯಾರ್ಥಿನಿಲಯ

1.	ಬೈಯಂದುರೆ, ಕುಂದಾಪುರ	1
2.	ಕಾರ್ಕಳ, ಕಾರ್ಕಳ	1
3.	ಮೂಡಬಿದ್ರೆ ಕಾರ್ಕಳ	1
4.	ನಿಟ್ಟೇ, ಕಾರ್ಕಳ	1
5.	ಕಾಪು, ಉಡುಪಿ	1
6.	ಕುರಡಿ, ಉಡುಪಿ	1
7.	ಉಡುಪಿ, ಉಡುಪಿ	1
8.	ಯಾದತಾಡಿ, ಉಡುಪಿ	1
		8

ಪ.ವರ್ಗದ ಬಾಲಕರ ವಿದ್ಯಾರ್ಥಿನಿಲಯ

1.	ಶಂಕರಾಯ, ಕುಂದಾಪರ	1
2.	ಅಬೇಕರ್, ಕಾರ್ಕಳ	1
	ಒಟ್ಟು	**2**

ಆ)	ಮಂಜೂರಾದ ಹುದ್ದೆಗಳು	1)	ನಿಲಯ ಮೇಲ್ವಿಚಾರಕರು	21
		2)	ಗ್ರೂಪ್ ಡಿ ನೌಕರರು	74
	ಕೊರತೆಯಿರುವ ಹುದ್ದೆಗಳು	1)	ನಿಲಯ ಮೇಲ್ವಿಚಾರಕರು	12
		2)	ಗ್ರೂಪ್ ಡಿ ನೌಕರರು	5

ಇ) ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಬಗ್ಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಶೀಘ್ರವಾಗಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಸದ್ಯಕ್ಕೆ ಖಾಲಿ ಇರುವ ಹುದ್ದೆಗಳಲ್ಲಿ ಸ್ಥಳೀಯ ಇಲಾಖಾ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರನ್ನು ಹೆಚ್ಚುವರಿ ಪ್ರಭಾರದ ಮೇಲೆ ಕಾರ್ಯನಿರ್ವಹಿಸುವ ವ್ಯವಸ್ಥೆ ಮಾಡಲಾಗಿದ್ದು, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನಾನುಕೂಲವಾಗದಂತೆ ನೋಡಿಕೊಳ್ಳಲಾಗುತ್ತಿದೆ. ಗ್ರೂಪ್ 'ಡಿ' ಹುದ್ದೆಗಳಿಗೆ ಸಂಬಂಧಿಸಿದಂತೆ ಖಾಲಿ ಇರುವ ಗ್ರೂಪ್ 'ಡಿ' ಹುದ್ದೆಗಳನ್ನು ತುಂಬಲು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಆದೇಶ ನೀಡಲಾಗಿದೆ.

ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳಲ್ಲಿ ಗ್ರಾಮ ಲೆಕ್ಕಿಗರ ಕೊರತೆ

700 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ಮತ್ತು ಉಡುಪಿ ತಾಲ್ಲೂಕಿನಲ್ಲಿ ಮಂಜೂರಾದ ಗ್ರಾಮ ಲೆಕ್ಕಿಗರ ಸಂಖ್ಯೆ ಎಷ್ಟು?

ಆ) ಕೊರತೆಯಿರುವ ಗ್ರಾಮಲೆಕ್ಕಿಗರ ಸಂಖ್ಯೆ ಎಷ್ಟು?

ಇ) ಈ ಕೊರತೆಯನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ)	ಕುಂದಾಪುರ	-	76
	ಉಡುಪಿ	-	79
	ಒಟ್ಟು	-	**155**
ಆ)	ಕುಂದಾಪುರ	-	25
	ಉಡುಪಿ	-	19
	ಒಟ್ಟು	-	**44**

ಇ) ಹೊಸ ನೇಮಕಾತಿಗೆ ಆರ್ಥಿಕ ಮಿತವ್ಯಯದಿಂದ ಅವಕಾಶವಿಲ್ಲದಿರುವುದರಿಂದ ಹುದ್ದೆಗಳು ಖಾಲಿ ಇರುತ್ತದೆ.